ತಹಸಿಲ್ದಾರ್ ಮತ್ತು ಗ್ರಾಮ ಲೆಕ್ಕಿಗರನ್ನು ಕೂಡಲೇ ಅಮಾನತ್ತುಗೊಳಿಸಿ ಈ ಬಗ್ಗೆ ವಿವರಣೆ ತರಿಸಿಕೊಂಡು ಅವರುಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಭೂ ಹೀನರಿಗೆ ಜಮೀನನ್ನು ಸರಿಯಾದ ರೀತಿಯಲ್ಲಿ ವಿತರಣೆ ಯಾಗುವಂತಹ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಸಂತರಾವ್ ಎಲ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ವಿಚಾರವಲ್ಲಿ ವರದಿಯನ್ನು ತರಿಸಿಕೊಂಡು ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

Re: Appointment of local persons in New Mangalore port

ಡಾ।। ವಿ.ಎಸ್. ಆಚಾರ್ಯ.—ಸನ್ಮಾನ್ಯ ಅಧ್ಯಕ್ಷರೆ ನವ ಮಂಗಳೂರು ಬಂದರು ನಮ್ಮ ರಾಜ್ಯದ ಹೆಮ್ಮೆಯ ಬಂದರು. ಅಲ್ಲಿನ ಜನರು ಆ ಬಂದರು ನಿರ್ಮಾಣವಾಗಲಿಕ್ಕೆ ತಮ್ಮ ಜಮೀನು ಮನೆ ಮಠ, ತೋಟ ಮತ್ತು ಕಟ್ಟಡಗಳ ತ್ಯಾಗ ಮಾಡಿ ನಿರ್ಮಾಣಕ್ಕಾಗಿ ಬಹಳ ಶ್ರಮಿಸಿದ್ದಾರೆ. ಇಲ್ಲಿ ಉದ್ಯೋಗ ಕೊಡುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಡಿಸ್‌ಪ್ಲೇಸ್ಡ್ ಪರ್ಸನ್ಸ್ ಮತ್ತು ಸ್ಥಳೀಯರಿಗೆ ಉದ್ಯೋಗವನ್ನು ಕೊಡಬೇಕೆಂದು ಗೃಹ ಇಲಾಖೆಯಿಂದ ಆದೇಶವನ್ನು ಹೊರಡಿಸಿದ್ದಾರೆ. ಈ ಆದೇಶದ ಪ್ರಕಾರ 'ಡೆಕ್ ಹ್ಯಾಂಡ್ಸ್' ೬೦ ಜನ ಅಂದರೆ ಹಡಗಿಗೆ ಸಾಮಾನು ಹೇರುವಂತಹವರ ಹುದ್ದೆಗಾಗಿ ದಿನಾಂಕ ೨೧-೧೧-೮೩ರಂದು ಪ್ರಕಟಣೆ ಹೊರಡಿಸಿದ್ದಾರೆ. ಕೇಂದ್ರ ಸರ್ಕಾರದವರ ಆದೇಶದ ಪ್ರಕಾರ ಸ್ಥಳೀಯ ನಿರ್ವಸತಿಕರಿಗೆ, ಹರಿಜನ ಗಿರಿಜನರಿಗೆ, ಮೀನುಗಾರ ನಿರ್ವಸತಿಕರಿಗೆ ಉದ್ಯೋಗಗಳನ್ನು ಕೊಡಬೇಕಾಗಿತ್ತು. ಈ ಹುದ್ದೆಗಾಗಿ ದಿನಾಂಕ ೫-೨-೮೪ರಂದು ಸಂದರ್ಶನ ಕೂಡ ಆಯಿತು. ಸುಮಾರು ೬೦ ಹುದ್ದೆಗಳಿಗೆ ಸುಮಾರು ೫ ಸಾವಿರ ಅರ್ಜಿಗಳು ಬಂದಿದ್ದವು. ನೇಮಕ ಮಾಡಿದ ಪಟ್ಟಿಯನ್ನು ನಂತರ ನೋಡಿದಾಗ ೬೦ ಹುದ್ದೆಗಳಲ್ಲಿ ಕೇವಲ ೨೩ ಹುದ್ದೆಗಳು ಮಾತ್ರ ನಿರ್ವಸತಿಕರಿಗೆ ಬದಗಿಸಲಾಗಿತ್ತು. ನನ್ನ ಪ್ರಶ್ನೆ ಏನೆಂದರೆ, ಆ ಬಂದರು ಕೇಂದ್ರ ಸರ್ಕಾರಕ್ಕೆ ಒಳಪಟ್ಟಿರಬಹುದು. ಉದ್ಯೋಗವನ್ನು ಕೊಡುವಾಗ ಸ್ಥಳೀಯರಿಗೆ ಮತ್ತು ನಿರ್ವಸತಿಕರಿಗೆ ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಆದ್ಯತೆ ಕೊಡಬೇಕು. ಮೊನ್ನೆ ನಡೆದ ನೇಮಕಾತಿಗಳಲ್ಲಿ ಬೇರೆ ಬೇರೆ ಕಡೆಗಳಿಂದ ಬಂದವರಿಗೆ ಉದ್ಯೋಗವನ್ನು ಒದಗಿಸಲಾಗಿದೆ. ಈ ಬಂದರಿನಲ್ಲಿ ಮೀನುಗಾರರಿಗೆ ಉದ್ಯೋಗ ಕೊಟ್ಟಿಲ್ಲ. ಮೀನುಗಾರರ ಹಿತಾಸಕ್ತಿ ಕಾಪಾಡಲಿಲ್ಲ. ನವ ಮಂಗಳೂರು ಹೊರಗಡೆ ವಾಸಿಸುವ ಶೇಕಡಾ ೭೦ರಷ್ಟು ಹೊರಗಿನವರು ಉದ್ಯೋಗಗಳನ್ನು ಕಬಳಿಸಿಕೊಂಡು ಹೋಗಿದ್ದಾರೆ. ೧೯೭೦ನೇ ಇಸವಿಯಿಂದ ಇಲ್ಲಿ ಅನ್ಯಾಯವಾಗಿದೆ. ಇದನ್ನು ಸರ್ಕಾರ ಗಭೀರವಾಗಿ ಪರಿಗಣಿಸಿಲ್ಲ. ಈಗ ಆಗಿರುವಂತಹ ನೇಮಕ ಪಟ್ಟಿಯನ್ನ ರದ್ದು ಮಾಡಬೇಕು. ನನಗೆ ತಿಳಿದ ಅಂಶಗಳ ಪ್ರಕಾರ ೬೦ ಜನರನ್ನು ನೇಮಕ ಮಾಡಿದಂತಹ ಪಟ್ಟಿಯಲ್ಲಿ ೩೭ ಜನ ಹೊರಗಿನವರೇ ಆಗಿದ್ದಾರೆ. ಆದುದರಿಂದ ಸರ್ಕಾರ ಆ ಪಟ್ಟಿಯನ್ನು ರದ್ದು ಮಾಡಬೇಕು ಮತ್ತು ನಿರ್ವಸತಿಕರಿಗೆ ಉದ್ಯೋಗಗಳನ್ನು ಕೊಡಬೇಕೆಂದು ಪ್ರಭಲವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಡಾ।।ಆಚಾರ್ಯರವರು ಹೇಳಿದಂತಹ ವಿಚಾರದಲ್ಲಿ ನನ್ನ ವ್ಯಾಪ್ತಿಯಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನೆಲ್ಲಾ ಮಾಡುತ್ತೇನೆ.

ಡಾ।।ವಿ.ಎಸ್. ಆಚಾರ್ಯ.—ಈಗ ಇದರಲ್ಲಿ ಬಹಳ ಅನ್ಯಾಯವಾಗಿದೆ ಶೇಕಡಾ ೭೦ರಷ್ಟು ಉದ್ಯೋಗಗಳನ್ನು ಹೊರಗಿನವರೇ ಕಬಳಿಸಿಕೊಂಡಿದ್ದಾರೆ. ನವ ಬಂದರಿನ ಒಳಗೆ ಮತ್ತು ಹೊರಗೆ ೭೦ರಷ್ಟು ಜನ ಬೇರೆ ಬೇರೆ ಕಡೆಗಳಿಂದ ಬಂದವರಾಗಿದ್ದಾರೆ. ಇದರ ಬಗ್ಗೆ ಕೂಡಲೇ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದಂತಹ ವಿಷಯವನ್ನು ನಾನು ತಿಳಿದುಕೊಂಡು ನನಗೆ ಇರತಕ್ಕ ಅಧಿಕಾರ ವ್ಯಾಪ್ತಿಯಲ್ಲಿ ಏನು ಪರಿಹಾರ ಒದಗಿಸಬೇಕು ಅದನ್ನು ಒದಗಿಸಲು ಪ್ರಯತ್ನ ಮಾಡುತ್ತೇನೆ.

Re: Suicide by two girls belongs to Nirmala convent Mysore

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ 'ನಿರ್ಮಲ' ಕಾನ್ವೆಂಟ್‌ನಲ್ಲಿ ಒಂದು ಅಹಿತರ ಘಟನೆ ನಡೆದಿದೆ. ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕುಮಾರಿ ಆಶಾ

ಮತ್ತು ಕುಮಾರಿ ಚಂದ್ರಕಲಾ ಎಂಬ ಇಬ್ಬರು ವಿದ್ಯಾರ್ಥಿನಿಯರು ಫೆಬ್ರುವರಿ ೨೫ನೇ ತಾರೀಖು ಶಾಲೆಗೆ ಬಂದವರು ಮತ್ತೆ ಪತ್ತೆಯಾಗಲಿಲ್ಲ. ಪೋಲೀಸರಿಗೆ ಕಂಪ್ಲೇಂಟ್ ಕೊಟ್ಟರು ಸಹ ಪತ್ತೆಯಾಗಲಿಲ್ಲ. ಈ ಸಂದರ್ಭದಲ್ಲಿ ೨೭ನೇ ತಾರೀಖು ಕೆ.ಆರ್.ಎಸ್. ಬೃಂದಾವನ ಡ್ಯಾಮ್‌ನಲ್ಲಿ ಪರಸ್ಪರ ತಬ್ಬಿಕೊಂಡಂತಹ ಸ್ಥಿತಿಯಲ್ಲಿ ಹೆಣಗಳು ತೇಲಾಡುತ್ತಿದ್ದುದನ್ನು ಅಲ್ಲಿಯ ವಾಚ್‌ಮನ್ ನೋಡಿದ್ದಾರೆ. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರು' ಪತ್ರಿಕೆಗಳಲ್ಲಿ ದಿನಾಂಕ ೨ನೇ ಮಾರ್ಚ್‌ನಲ್ಲಿ ಈ ಬಗ್ಗೆ ವರದಿ ಬಂದಿದೆ. "A Watchman of K.R.S. Brindavan Garden saw the dead bodies of these two girls embrazing each other floting on the surface of water on the morning of February 27th and reported the matter to the police". ಇದು ಆತ್ಮಹತ್ಯೆ ಅಲ್ಲವೆಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಆಶಾ ಮತ್ತು ಚಂದ್ರಕಲಾ ಇಬ್ಬರು ಸ್ನೇಹಿತೆಯರು, ೯ನೇ ಸ್ಟ್ಯಾಂಡರ್ಡ್‌ನಲ್ಲಿ ಓದುತ್ತಿದ್ದರು. ಈ ಕಾನ್‌ವೆಂಟ್ ಶಾಲೆಯಲ್ಲಿ ಇರುವಂತಹ ಒಬ್ಬ ಫಿಸಿಕಲ್ ಇನ್‌ಸ್ಟ್ರಕ್ಟರ್ ಜಿಂಜಪ್ಪ ಎಂಬುವನು ಕೆಲವು ಗಂಡು ಹುಡುಗರ ಜೊತೆ ಸೇರಿ ಈ ಹುಡುಗಿಯರನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದನಂತೆ, ಒಂದು ಸಾರಿ ಹೆಣ್ಣು ಮಕ್ಕಳ ಪುಸ್ತಕದಿಂದ ಯಾರದೋ ಫೋಟೋ ಕೆಳಗೆ ಬಿದ್ದಾಗ ಅವರ ಕ್ಲಾಸ್ ಟೀಚರ್ ಇದನ್ನು ನೋಡಿ ಈ ರೀತಿ ಮಾಡುವುದನ್ನು ನಾವು ನಿಮ್ಮ ತಂದೆ ತಾಯಿಗಳಿಗೆ ತಿಳಿಸುತ್ತೇವೆಂದು ಹೆದರಿಸಿದರು. ಇದರ ವಿಷಯವು ಹೊರಗಡೆ ಬರಬಹುದೆಂದು ಭಯಪಟ್ಟು ಇವರಿಬ್ಬರು ದಿನಾಂಕ ೨೭ರಂದು ಕೆ.ಆರ್.ಎಸ್. ಆಣೆಕಟ್ಟಿನಲ್ಲಿ ಬಿದ್ದುದರಿಂದ ಇವರ ಹೆಣಗಳು ತೇಲಾಡುತ್ತಿದ್ದವು. ಇಲ್ಲಿ ಪ್ರಮುಖವಾದ ವಿಷಯ ಎಂದರೆ ಈ ಜಿಂಜಪ್ಪ ಎನ್ನುವವರ ಬಗ್ಗೆ ಹಿಂದೆ ಕೂಡಾ ಪತ್ರಿಕೆಯಲ್ಲಿ ಪ್ರಕಟವಾಗಿದೆ. "ಸ್ಟಾರ್ ಆಫ್ ಮೈಸೂರು" ಎನ್ನುವ ದಿನಪತ್ರಿಕೆಯಲ್ಲಿ ದಿನಾಂಕ ೨-೩-೮೪ ರಂದು ಈ ರೀತಿ ಪ್ರಕಟವಾಗಿದೆ,—

> "As a matter of a fact 'Star of Mysore' had published one of the many letters received from the parents of girl students attending this convent regarding the misconduct of Jinjappa with his students."

ಎಂದರೆ ಈ ಜಿಂಜಪ್ಪ ಎನ್ನುವವನು ಆ ಪತ್ರಗಳನ್ನು ಇಟ್ಟುಕೊಂಡು ಆ ಹೆಣ್ಣು ಮಕ್ಕಳನ್ನು ಬ್ಲಾಕ್ ಮೇಲ್ ಮಾಡುತ್ತಾ ಇದ್ದನು. ಈ ಬಗ್ಗೆ ಅಲ್ಲಿಯ ಸ್ಥಳೀಯ ಅಧಿಕಾರಿಗಳು ಯಾವುದೇ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಈ ಒಂದು ಪ್ರಕರಣದಲ್ಲಿ ಜಿಂಜಪ್ಪ ಅವರ ಕೈವಾಡ ಇದೆ ಅನ್ನುವ ವಿಷಯ ಇವತ್ತು ಮೈಸೂರು ನಗರದಲ್ಲಿ ಜಗಜ್ಜಾಹೀರಾಗಿದೆ. ಇವೊತ್ತಿನ ದಿವಸ ವಿದ್ಯಾರ್ಥಿ ವಿದ್ಯಾರ್ಥಿನಿಯರ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಹೇಗೆ ಎಂದು ಚಿಂತೆಗೀಡಾಗಿದ್ದಾರೆ. ಈ ಒಂದು ಪ್ರಕರಣದ ಬಗ್ಗೆ ಮೈಸೂರಿನ ಪತ್ರಿಕೆಗಳಲ್ಲಿ ಬಿಟ್ಟರೆ ಬೇರೆ ಯಾವ ದೊಡ್ಡ ಪತ್ರಿಕೆಗಳಲ್ಲೂ ಪ್ರಕಟಣೆಗೊಂಡಿರುವುದಿಲ್ಲ. ಇಲ್ಲಿ ಇನ್ನೊಂದು ಪ್ರಮುಖವಾದ ವಿಚಾರ ಎಂದರೆ, ಈ ಇಬ್ಬರ ಜೊತೆ ಇನ್ನೊಬ್ಬಳು ಸವಿತ ಎನ್ನುವ ಹುಡುಗಿ ಅವರ ಜೊತೆ ಹೋಗಿದ್ದಾಳೆ. ಆದರೆ ಆಕೆ ಆತ್ಮಹತ್ಯೆ ಮಾಡಿಕೊಂಡಿಲ್ಲ. ಈ ಒಂದು ಪ್ರಕರಣದ ಬಗ್ಗೆ ಆಕೆಗೆ ಎಲ್ಲಾ ತಿಳಿದಿದೆ. ಈ ಪ್ರಕರಣದಲ್ಲಿ ಜಿಂಜಪ್ಪನ ಕೈವಾಡ ಇದೆಯೇ ಎಂಬ ಬಗ್ಗೆ ನೋಡಬೇಕು. ಆ ಇಬ್ಬರನ್ನು ಯಾರಾದರೂ ಕೊಲೆ ಮಾಡಿ ಸಾಗರಕ್ಕೆ ಎಸೆದಿದ್ದು ಇದನ್ನು ಮುಚ್ಚಿಹಾಕಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆಯೇ ಅಥವಾ ಹೇಗೆ ಎಂಬ ಬಗ್ಗೆ ಸಮಗ್ರ ತನಿಖೆಯಾಗಬೇಕು. ಈ ಬಗ್ಗೆ ಆ ಜಿಂಜಪ್ಪನವರ ತನಿಖೆ ಆಗಬೇಕು. ಮಾನ್ಯ ಮುಖ್ಯಮಂತ್ರಿಗಳು ಸರಿಯಾದ ಮಾಹಿತಿಯನ್ನು ತಿಳಿದು ಆ ಬಗ್ಗೆ ಸದನಕ್ಕೆ ಇಂದೇ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ವಿವರಗಳನ್ನು ಏನು ಕೊಟ್ಟಿದ್ದಾರೆ ಆ ಬಗ್ಗೆ ನಾನು ವರದಿ ತರಿಸುತ್ತೇನೆ. ಆ ನಂತರ ಏನು ಕ್ರಮವನ್ನು ಕಾನೂನಿನ ಚೌಕಟ್ಟಿನಲ್ಲಿ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ಘಟನೆ ನಡೆದಿರುವುದು ೨೭ನೇ ತಾರೀಖು. ಇದು ಆತ್ಮಹತ್ಯೆ ಇರಬಹುದೆಂದು ಪತ್ರಿಕೆಗಳಲ್ಲಿ ಬಂದಿದೆ. ಇದರಲ್ಲಿ ಜಿಂಜಪ್ಪನವರ ಕೈವಾಡ ಇದೆ ಎಂದು ತಿಳಿದುಬರುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಸರಿಯಾದ ಮಾಹಿತಿಯನ್ನು

ಈ ಸದನಕ್ಕೆ ಒದಗಿಸಬೇಕು. ಹಾಗೂ ಈ ಬಗ್ಗೆ ಸಿ.ಒ.ಡಿ. ತನಿಖೆ ಮಾಡಬೇಕೆಂದು ಹಾಗೂ ಜಿಂಜಪ್ಪನವರನ್ನು ಸಸ್ಪೆಂಡ್‌ನಲ್ಲಿ ಇಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಏನು ಜಿಂಜಪ್ಪನವರ ಬಗ್ಗೆ ಹೇಳಿದ್ದಾರೆ ಆ ಬಗ್ಗೆ ವರದಿಯನ್ನು ತರಿಸಿಕೊಂಡು ಆನಂತರ ಕಾನೂನು ಪ್ರಕಾರ ಅವರು ತಪ್ಪಿತಸ್ಥರಾದಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗಲೇ ಸಂಜೆಗೆ ಉತ್ತರ ಕೊಡಿ ಎಂದರೆ ಹೇಗೆ ? ಆದಷ್ಟು ಬೇಗ ವಿವರವನ್ನು ತರಿಸಿಕೊಂಡು ಪರಿಣಾಮಕಾರಿ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಇದನ್ನು ಅವಸರದಲ್ಲಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಗುರುತರವಾದ ಆಪಾದನೆ ಮಾಡಿರುವಾಗ ಈ ಬಗ್ಗೆ ಅವಸರವಾಗಿ ಮಾಡಬೇಕಾಗುತ್ತದೆ. ಮೈಸೂರಿಗೆ ಫೋನ್ ಮಾಡಿ ವಿಷಯವನ್ನು ತಿಳಿದುಕೊಳ್ಳಿ ಬಹುದಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವಸರ ಏಂದರೆ, ವರದಿಯನ್ನು ಬೇಗ ತರಿಸುತ್ತೇನೆ. ಅದನ್ನು ೨೪ ಗಂಟೆಯೊಳಗೆ ಮಾಡಬೇಕಾಗುತ್ತದೆ. ಎಲ್ಲಾ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳಬೇಕಾದರೆ ಎಷ್ಟು ಕಾಲಾವಕಾಶ ಬೇಕಾಗಬಹುದು ಎಂಬುದು ತಮಗೆ ಗೊತ್ತಿರಬಹುದಲ್ಲವೇ ?

ಶ್ರೀ ಬಿ.ಎಸ್. ಯಡಿಯೂರಪ್ಪ.—ಪ್ರಕರಣ ನಡೆದು ಸಾಕಷ್ಟು ದಿವಸಗಳು ಆಗಿರುವುದರಿಂದ ಈ ಬಗ್ಗೆ ಅಲ್ಲಿನ ಪೋಲೀಸರಲ್ಲಿ ಮಾಹಿತಿ ಇರುವುದಿಲ್ಲವೇ ? ಸರ್ಕಾರ ಈ ಸದನಕ್ಕೆ ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮಂತ್ರಿಗಳು ಈ ಬಗ್ಗೆ ಹೇಳಬೇಕಾಗುತ್ತದೆ. ಈ ಇಲಾಖೆ ಮಂಲಗಿದೆಯೋ ಆಥವಾ ಇವರು ಮಂಲಗಿದ್ದಾರೋ ಎಂದು ನಾನು ಕೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾವೇನೂ ಮಲಗಿಲ್ಲ. ನಿಮಗಿಂತಲೂ ಜಾಸ್ತಿ ಎಚ್ಚರದಿಂದ ನಾವು ಇದ್ದೇವೆ. ತಾವು ಮಾತನಾಡುವಾಗ ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಎಷ್ಟು ಬೇಗ ವರದಿ ತರಿಸಿಕೊಡುವುದಕ್ಕಾಗುತ್ತದೆ ಆ ಬಗ್ಗೆ ಸಾಧ್ಯವಾದ ಪ್ರಯತ್ನ ಮಾಡುತ್ತೇವೆ. ಆದರೆ ಸರಿಯಾದ ಬಿಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ೧ ಗಂಟೆಯಲ್ಲಿ ೨ ಗಂಟೆಯಲ್ಲಿ ಮಾಡ ಬೇಕೆಂದರೆ ಆದು ಅನ್‌ರಿಯಲಿಸ್ಟಿಕ್ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಲ್ಲಿನ ಪೋಲೀಸ್ ಅಧಿಕಾರಿಗಳು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

Re: Strike by Junior doctors,

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ಸುಮಾರು ೧,೫೦೦ ಜನ ಜೂನಿಯರ್ ಡಾಕ್ಟರ್‌ಗಳು ಮುಷ್ಕರ ನಿರತರಾಗಿದ್ದಾರೆ. ಜನವರಿ ತಿಂಗಳಿನಿಂದ ಅವರು ಆರೋಗ್ಯ ಇಲಾಖೆಯ ಮಂತ್ರಿಗಳ ಜೊತೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಯದಿದ್ದ ಕಾರಣ, ೧೫ ದಿವಸ ಗಳಲ್ಲಿ ಮಾಡುತ್ತೇವೆಂದು ಭರವಸೆ ನೀಡಿ ಅದನ್ನು ಈಡೇರಿಸದಿದ್ದಾಗ ಇವರು ಮುಷ್ಕರ ಹೂಡಿ ದ್ದಾರೆ. ಇವತ್ತು ಕಿರಿಯ ವೈದ್ಯರಿಗೆ ರೂ. ೫೦೦ ಹಾಗೂ ೫೦ ರೂಪಾಯಿಗಳನ್ನು ಮತ್ತು ಹೌಸ್ ಸರ್ಜನ್‌ಗಳಲ್ಲಿ ೪೦೦ ಹಾಗೂ ೪೦ ರೂಪಾಯಿಗಳನ್ನು ಸ್ಟೈಫಂಡ್ ಕೊಡುತ್ತಿದ್ದಾರೆ. ಇದನ್ನು ೫ ವರ್ಷಗಳ ಕೆಳಗೆ ನಿಗಧಿ ಮಾಡಲಾಗಿದ್ದು ಈ ಹಣದಲ್ಲಿ ಅವರು ಕೆಲಸ ಮಾಡಲು ಹೇಗೆ ಸಾಧ್ಯ ? ಇವತ್ತು ಪಕ್ಕದ ರಾಜ್ಯಗಳಲ್ಲಿ ೪೧೦-೯೦೦ ರೂಪಾಯಿಗಳನ್ನು ಕೊಡುತ್ತಿದ್ದು, ಅವರು ಕೇಳಿರ ತಕ್ಕದ್ದರಲ್ಲಿ ನ್ಯಾಯ ಇದೆ. ಅವರ ಪೂರ್ತಿ ಡಿಮಾಂಡ್‌ನ್ನು ಸರಿಪಡಿಸಲಾಗದಿದ್ದರೆ ಎಷ್ಟು ಮಾಡುತ್ತೇವೆಂದಾದರೂ ಹೇಳಬೇಕು. ಬಾರಿಂಗ್ ಆಸ್ಪತ್ರೆಯಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಅವರನ್ನು ವಿಕ್ಟೋರಿಯ ಹಾಸ್ಪೆಟಲ್‌ಗೆ ವರ್ಗಾಯಿಸಿದ್ದಾರೆ. ಇದರಿಂದ ಬೆಂಗಳೂರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆ. ಇವೊತ್ತು ನಾಲ್ಕೈದು ಕಾಲೇಜಿನ ೧೫೦೦ ಜನ ವೈದ್ಯರು ಮುಷ್ಕರ ಹೂಡಿದ್ದಾರೆ. ಈ ಬಗ್ಗೆ ಸರ್ಕಾರ ಉದಾಸೀನವಹಿಸುವುದು ಸರಿಯಲ್ಲ. ಈ ಬಗ್ಗೆ ಮಾತುಕತೆ ನಡೆಸಿ ಸಮಸ್ಯೆ ಪರಿಹಾರ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ?